# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1008 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24-07-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು; ಅವುಗಳ ಉದ್ದವೆಷ್ಟು; ಅವುಗಳ ನಿರ್ವಹಣೆ ಮಾಡುವವರು ಯಾರು; ಸದರಿ ಹೆದ್ದಾರಿಗಳಲ್ಲಿ ಕಳೆದ 3 ವರ್ಷದಿಂದ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು; ಎಷ್ಟು ಸಾವುನೋವುಗಳು ಸಂಭವಿಸಿರುತ್ತವೆ; ಯಾವ ವಿಧದ ಅಪಘಾತಗಳು ಪದೇ ಪದೇ ಸಂಭವಿಸುತ್ತಿರುತ್ತವೆ; (ಸಂಪೂರ್ಣ ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿಗಳ ವಲಯ ಬೆಂಗಳೂರು ಹಾಗೂ ಬೆಳಗಾವಿಯ ಕಾರ್ಯವ್ಯಾಪ್ತಿಗೆ ಒಳಪಡುತ್ತವೆ.<br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ 26 ರಾಷ್ಟ್ರೀಯ ಹೆದ್ದಾರಿಗಳು (ಒಟ್ಟು 4200.00 ಕಿ.ಮೀ. ಉದ್ದ); ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ವಲಯದ ಕಾರ್ಯವ್ಯಾಪ್ತಿಗೆ 22 ರಾಷ್ಟ್ರೀಯ ಹೆದ್ದಾರಿಗಳು (ಒಟ್ಟು 2335.67 ಕಿ.ಮೀ ಉದ್ದ) ಹಾಗೂ ರಾಷ್ಟ್ರೀಯ ಹೆದ್ದಾರಿ, ಉತ್ತರ ವಲಯ, ಬೆಳಗಾವಿ ವ್ಯಾಪ್ತಿಯಲ್ಲಿ ಒಟ್ಟು 14 ಹೆದ್ದಾರಿಗಳು (ಒಟ್ಟು ಉದ್ದ 1436.33 ಕಿ.ಮೀ.) ಇರುತ್ತದೆ.<br>ರಾಜ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸವಾರರು Lane Discipline, ನಿರ್ಲಕ್ಷಿತ ವಾಹನ ಚಾಲನೆ, ಕುಡಿದು ವಾಹನ ಚಾಲನೆ, ಅತಿಯಾದ ವೇಗದ ಚಾಲನೆ, ಸಂಚಾರಿ ನಿಯಮಗಳನ್ನು ಅನುಸರಿಸದ ಹಾಗೂ ಇನ್ನಿತರೆ ಕಾರಣಗಳಿಂದ ಅಪಘಾತಗಳು ಸಂಭವಿಸುತ್ತಿದೆ.<br>ಕಳೆದ ಮೂರು ವರ್ಷಗಳಿಂದ ಸಂಭವಿಸಿರುವ ಅಪಘಾತಗಳ ವಿವರಗಳನ್ನು ಈ ಕೆಳಕಂಡಂತಿದೆ. |

**Accident Report pertaining to NHAI**

| Year | No. of Accidents | Fatalities (deaths) |
|---|---|---|
| 2021 | 7503 | 1025 |
| 2022 | 5771 | 919 |
| 2023 | 7900 | 1203 |

**Accident Report pertaining to NH Zone,Bengaluru**

| Year | No. of Accidents | Fatalities (deaths) |
|---|---|---|
| 2021 | 1688 | 325 |
| 2022 | 2012 | 374 |
| 2023 | 1433 | 311 |

ರಾಷ್ಟ್ರೀಯ ಹೆದ್ದಾರಿ ಬೆಳಗಾವಿ, ವಲಯ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಗಳ ಮೇಲಾದ ಅಪಘಾತಗಳ ವಿವರ ಈ ಕೆಳಗಿನಂತಿದೆ.

| ವಿಭಾಗ | ರಾ.ಹೆ ಗಳ ಸಂಖ್ಯೆ | ಉದ್ದ (ಕೀಮಿ) | ಅಪಘಾತಗಳ ಸಂಖ್ಯೆ | | |
|---|---|---|---|---|---|
| | | | 2021 | 2022 | 2023 |
| ಹುಬ್ಬಳ್ಳಿ | 04 | 311.380 | 242 | 122 | --- |
| ವಿಜಯಪುರ | 06 | 517.929 | 257 | 232 | 92 |
| ಕಲಬುರ್ಗಿ | 06 | 429.38 | 197 | 221 | 140 |
| ಬೆಳಗಾವಿ | 02 | 177.64 | 17 | 07 | 01 |
| ಒಟ್ಟು | | 1436.33 | 713 | 582 | 233 |

ಆ) NHAI ಪೆಟ್ರೋಲಿಂಗ್ ಇದ್ದರೂ ಸಹ ವ್ಯವಸ್ಥಿತವಾಗಿರದೇ ಹೆದ್ದಾರಿಯ ಮುಖ್ಯ ರಸ್ತೆಯ ಬಲ ಮತ್ತು ಎಡ ಬದಿಗಳಲ್ಲೇ ವಾಹನ ನಿಲುಗಡೆ ಮಾಡುವುದು ಕಂಡು ಬರುತ್ತಿದ್ದು, ಇದರಿಂದಾಗಿ ಹಾಗೂ ಮುಖ್ಯ ರಸ್ತೆಯ ಮೇಲೆ ಚಲನವಲನಗಳ ಮೇಲೆ ನಿಗಾ ಇಲ್ಲದೇ ಇರುವುದರಿಂದ ಯಾವ ಲೈನ್‌ನಲ್ಲಿ ಯಾವ ವಾಹನ ತರಬೇಕು ಎನ್ನುವುದು ಸಮರ್ಪಕವಾಗಿ ನಡೆಯುತ್ತಿಲ್ಲ ಇಂತಹ ಸಮಸ್ಯೆಗಳಿಂದ ಅಪಘಾತಗಳು ಸಂಭವಿಸಿ ಸಾವು ನೋವುಗಳ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು

ಇ) ಅವಶ್ಯಕತೆಗಳಿಗನುಗುಣವಾಗಿ ಹೆದ್ದಾರಿಯ ಅಕ್ಕಪಕ್ಕದಲ್ಲಿ ಇದ್ದು ಅಲ್ಲಿ ತಾತ್ಕಾಲಿಕವಾಗಿ ವಾಹನ ನಿಲುಗಡೆಗೆ ಅನುಮತಿ ಇರುತ್ತದೆ. ಆದರೆ ಆ ಸ್ಥಳದಲ್ಲೇ ರಾತ್ರಿಯಿಡಿ ವಾಹನ ನಿಲುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ನಿರ್ವಹಣೆ ಮತ್ತು ಮೇಲ್ವಿಚಾರಣೆ ಹಾಗೂ ಅಸಮರ್ಪಕ ಬಳಕೆಯಿಂದ ಅಪಘಾತಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸದರಿಯವರ ಸುಪರ್ಧಿಯಲ್ಲಿರುವ ಹೆದ್ದಾರಿಗಳಲ್ಲಿ ಅನಧಿಕೃತವಾಗಿ ವಾಹನ ನಿಲುಗಡೆಯನ್ನು ತೆರವುಗೊಳಿಸಲು, ಸ್ಥಗಿತಗೊಂಡ ವಾಹನಗಳು, ಅಪಘಾತಗೊಂಡ ವಾಹನಗಳು ಹಾಗೂ ಇನ್ನಿತರೆ ತುರ್ತು ಸಂದರ್ಭದಲ್ಲಿ ದಿನದ 24/7 ಗಂಟೆಯು ಮೇಲ್ವಿಚಾರಣೆ / ಉಸ್ತುವಾರಿವಾಗಿ ಗಸ್ತು ತಿರುಗುವ ವಾಹನವನ್ನು ನಿಯೋಜಿಸಲಾಗಿರುತ್ತದೆ. ಮುಂದುವರೆದು, ಚತುಷ್ಪಥ/ ಷಟ್ಪಥ ಹೆದ್ದಾರಿಗಳಲ್ಲಿ ವೇಗದಲ್ಲಿ ಚಲಿಸುವ ವಾಹನವು ಬಲಭಾಗದಲ್ಲಿ ಹಾಗೂ ಮಂದಗತಿಯಲ್ಲಿ ಚಲಿಸುವ ವಾಹನವು ಎಡಭಾಗದಲ್ಲಿ ಚಲಿಸಬೇಕಾಗಿರುತ್ತದೆ. ಆದರೆ, ವಾಹನ ಸವಾರರು Lane Discipline, ನಿರ್ಲಕ್ಷಿತ ವಾಹನ ಚಾಲನೆ, ಕುಡಿದು ವಾಹನ ಚಾಲನೆ, ಅತಿಯಾದ ವೇಗದ ಚಾಲನೆ, ಸಂಚಾರಿ ನಿಯಮಗಳನ್ನು ಅನುಸರಿಸದ ಹಾಗೂ ಇನ್ನಿತರೆ ಕಾರಣಗಳಿಂದ ಅಪಘಾತಗಳು ಸಂಭವಿಸುತ್ತಿದ್ದು, ಗಸ್ತು ತಿರುಗುವ ತಂಡದಿಂದ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಸಹ ಮಾಡಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಈ) ಸದರಿ ಅಪಘಾತಗಳಿಂದ ತಮ್ಮದಲ್ಲದ ತಪ್ಪಿಗೆ ಪ್ರಾಣತ್ಯಾಗ ಮಾಡುತ್ತಿರುವ ಜೀವಗಳಿಗೆ ಬೆಲೆಯಿಲ್ಲದಂತಾಗುವುದಿಲ್ಲವೇ;

| | | |
|---|---|---|
| | ರಸ್ತೆಯಲ್ಲಿ ನಿಲ್ಲಿಸಿದ ವಾಹನಕ್ಕೆ ಡಿಕ್ಕಿಯಿಂದಾಗಿ ಅಪಘಾತ ಸಂಭವಿಸಿ ಸಾವು-ನೋವುಗಳ ಬಗ್ಗೆ ದಿನಂಪ್ರತಿಯಾಗಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಸ್ತೆಯಲ್ಲಿ ಮತ್ತು ರಸ್ತೆ ಬದಿ ವಾಹನಗಳನ್ನು ನಿಲ್ಲಿಸುವುದನ್ನು ತಡೆಯಲು ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ? (ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಲೋಇ 146 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು